# ನಿವಾಸಿ ವ್ಯಕ್ತಿಗಳಿಗೆ ವಿದೇಶೀ ಕರೆನ್ಸಿ ಖಾತೆಯ ಹೊಸ ಸೌಲಭ್ಯ

**ನವೆಂಬರ್ 1, 2002**

ಈಗ ಸದ್ಯದಲ್ಲಿ ಭಾರತದಲ್ಲಿರುವ ನಿವಾಸಿಯೊಬ್ಬ 2000 ಅಮೆರಿಕಾ ಡಾಲರುಗಳನ್ನು ಅಥವಾ ಅದಕ್ಕೆ ಸಮನಾದ ಮೊಬಲಗನ್ನು ನಗದು ಮತ್ತು/ಅಥವಾ ಪ್ರವಾಸಿ ಚೆಕ್ಕುಗಳ ರೂಪದಲ್ಲಿ ಹೊಂದಿರಲು ಅನುಮತಿಯಿದೆ. ಆದರೆ ಅದನ್ನು ಅವನು ಈ ಮುಂದಿನಂತೆ ಸಂಪಾದಿಸುವಂಥದ್ದಾಗಿರಬೇಕು.

(i) ಅವನು ಭಾರತದ ಹೊರಗಿನ ಸ್ಥಳಕ್ಕೆ ಭೇಟಿ ನೀಡಿದಾಗ ಸೇವೆಗಳಿಗೆ ಸಂದಾಯವಾದ ರೂಪದಲ್ಲಿ;

(ii) ಭಾರತದಲ್ಲಿ ನಿವಾಸಿಯಾಗಿಲ್ಲದಿರುವ ಅಥವಾ ಭಾರತಕ್ಕೆ ಭೇಟಿ ನೀಡಿದ ಯಾವುದೇ ವ್ಯಕ್ತಿಯಿಂದ ಕಾನೂನು ಸಮ್ಮತ ಹೊಣೆಗಾರಿಕೆಯನ್ನು ಇತ್ಯರ್ಥಗೊಳಿಸುವುದಕ್ಕಾಗಿ;

(iii) ಭಾರತದ ಹೊರಗಿನ ಸ್ಥಳಕ್ಕೆ ಭೇಟಿ ನೀಡಿದಾಗ ಸಂಭಾವನೆಯ ಉಡುಗೊರೆಯ ರೂಪದಲ್ಲಿ;

(iv) ವಿದೇಶದಲ್ಲಿ ಪ್ರವಾಸಕ್ಕೆಂದು ವ್ಯಕ್ತಿಯಿಂದ ಸ್ವೀಕರಿಸಿದ ಅಧಿಕೃತ ಆದರೆ ಖರ್ಚು ಮಾಡದ ಮೊತ್ತವಾಗಿರಬೇಕು.

ನಿವಾಸೀ ವ್ಯಕ್ತಿಗಳಿಗೆ ಲಭ್ಯವಿರುವ ವಿದೇಶೀ ವಿನಿಮಯ ಸೌಲಭ್ಯಗಳನ್ನು ಮತ್ತಷ್ಟು ಉದಾರಗೊಳಿಸುವ ದಿಕ್ಕಿನಲ್ಲಿ ಮತ್ತೊಂದು ಕ್ರಮವಾಗಿ, ಭಾರತದಲ್ಲಿ ವಾಸಿಸುವ ವ್ಯಕ್ತಿಗೆ, ಭಾರತದಲ್ಲಿ ಲೈಸೆನ್ಸ್ ಹೊಂದಿದ ಬ್ಯಾಂಕಿನಲ್ಲಿ (ಅದು ಅಧಿಕೃತ ವ್ಯಾಪಾರಿಯೂ ಆಗಿರಬೇಕು) ವಿದೇಶೀ ಕರೆನ್ಸಿ ಖಾತೆಯನ್ನು ತೆರೆಯಲು, ಹೊಂದಿರಲು ಮತ್ತು ನಿರ್ವಹಿಸಲು ಅನುಮತಿ ನೀಡಲಾಗಿದೆ. ಈ ಖಾತೆಯನ್ನು ನಿವಾಸಿ ವಿದೇಶೀ ಕರೆನ್ಸಿ (ದೇಸಿ) ಖಾತೆ ಎಂದು ಕರೆಯಲಾಗುವುದು ಮತ್ತು ನಿವಾಸಿಗಳು ಮೇಲೆ (i) ರಿಂದ (iv)ರ ವರೆಗೆ ನಿರ್ದಿಷ್ಟಪಡಿಸಲಾದ ಮೂಲಗಳಿಂದ ಸಂಪಾದಿಸಿದ ವಿದೇಶೀ ವಿನಿಮಯವನ್ನು ಈ ಖಾತೆಯಲ್ಲಿಡಬಹುದು.

ಇಲ್ಲಿಯವರೆಗೆ, ಮೇಲೆ ಹೇಳಿದ ಯಾವುದೇ ಮೂಲದಿಂದ ಸಂಪಾದಿಸಿದ 2000 ಅಮೇರಿಕಾದ ಡಾಲರುಗಳಿಗೆ ಮೀರಿದ ವಿದೇಶೀ ವಿನಿಮಯವನ್ನು ಇಲ್ಲಿನ ನಿವಾಸಿಗಳಿಗೆ ಬದಲಾಯಿಸುವಂತೆ ಮತ್ತು ರೂಪಾಯಿಗೆ ಪರಿವರ್ತಿಸುವಂತೆ ಅಗತ್ಯಪಡಿಸಲಾಗುತ್ತಿತ್ತು. ಈಗ ಈ ಸೌಲಭ್ಯವನ್ನು ಪ್ರಾರಂಭಿಸಿರುವುದರಿಂದ ನಿವಾಸಿಗಳು ಹಾಗೆ ಸಂಪಾದಿಸಿದ ವಿದೇಶೀ ವಿನಿಮಯವನ್ನು ನಿವಾಸಿ ವಿದೇಶೀ ಕರೆನ್ಸಿ (ದೇಸಿ) ಖಾತೆಯಲ್ಲಿ ಯಾವುದೇ ನಿರ್ದಿಷ್ಟಪಡಿಸಿದ ವಿದೇಶೀ ಕರೆನ್ಸಿಯಲ್ಲಿ ಅಥವಾ ಅವರಿಚ್ಛೆಯಂತೆ ಪರಿವರ್ತಿಸಿದ ನಂತರ ರೂಪಾಯಿಗಳ ಖಾತೆಯಲ್ಲಿ ಠೇವಣಿ ಇಡಬಹುದು. ಈ ನಿವಾಸಿ ವಿದೇಶೀ ಕರೆನ್ಸಿ (ದೇಸಿ) ಖಾತೆಯನ್ನು ತೆರೆಯುವ ಈ ಹೊಸ ಸೌಲಭ್ಯದ ಜೊತೆಗೆ ಈ 2000 ಅಮೇರಿಕಾದ ಡಾಲರುಗಳನ್ನು ಅಥವಾ ಅದಕ್ಕೆ ಸಮನಾದ ಮೊಬಲಗನ್ನು ಕರೆನ್ಸಿ ನೋಟುಗಳ ಮತ್ತು/ಅಥವಾ ವಿದೇಶೀ ಕರೆನ್ಸಿ ಪ್ರವಾಸೀ ಚೆಕ್ಕುಗಳ ರೂಪದಲ್ಲಿ ಹೊಂದಿರಬಹುದೆಂಬ ಈಗಿರುವ ಸೌಲಭ್ಯವೂ ಲಭ್ಯವಿರುತ್ತದೆ.

ನಿವಾಸೀ ವಿದೇಶೀ ಕರೆನ್ಸಿ (ದೇಸಿ) ಖಾತೆಯಲ್ಲಿ ಇರುವ ಬಾಕಿ ಮೊತ್ತವನ್ನು, ನಿವಾಸೀ ಭಾರತೀಯರಿಗೆ ಅನ್ವಯಿಸುವ ಸದ್ಯದ ವಿದೇಶೀ ವಿನಿಯಮಗಳ ಅಡಿಯಲ್ಲಿ ಸಮ್ಮತವಿರುವ ಯಾವುದೇ ಉದ್ದೇಶಕ್ಕೆ (ಉದಾ: ಪ್ರಯಾಣ, ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆ, 5000 ಅಮೇರಿಕಾ ಡಾಲರುಗಳವರೆಗೆ ಉಡುಗೊರೆಗಳು, ಪುಸ್ತಕಗಳನ್ನು ನೇರವಾಗಿ ಅಥವಾ ಅಂತರ್ಜಾಲದ ಮೂಲಕ ಖರೀದಿ ಮಾಡಲು, ವಿದೇಶದಲ್ಲಿ ಶಿಕ್ಷಣ, ಇತ್ಯಾದಿಗಳಿಗೆ) ಬಳಸಬಹುದು.

ವಿದೇಶೀ ವಿನಿಮಯವನ್ನು ಮೇಲೆ ಹೇಳಿದ ಅನುಮತಿಸುವ ಮಾರ್ಗಗಳಲ್ಲಿ ಸಂಪಾದಿಸಿದ್ದರೆ, ನಿವಾಸಿ ವಿದೇಶೀ ಕರೆನ್ಸಿ (ದೇಸಿ) ಖಾತೆಯಲ್ಲಿ ಇರುವ ಮೊಬಲಗಿನ ಮೇಲೆ ಒಟ್ಟಾರೆ ಯಾವುದೇ ಮಿತಿ ಇರುವುದಿಲ್ಲ. ಈ ಖಾತೆಯನ್ನು ಚೆಕ್ ಸೌಲಭ್ಯವಿರುವ ಚಾಲ್ತಿ (ಕರೆಂಟ್) ಖಾತೆಯ ರೂಪದಲ್ಲಿ ನಿರ್ವಹಿಸಲಾಗುತ್ತದೆ.

ಈಗ ಜಾರಿಯಲ್ಲಿರುವ ವಿದೇಶೀ ವಿನಿಮಯ ನಿಯಂತ್ರಣವನ್ನು ತಿದ್ದುಪಡಿ ಮಾಡಲು ಅಗತ್ಯವಾದ ಅಧಿಸೂಚನೆಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುತ್ತಿದೆ. ಅಧಿಸೂಚನೆಯ ಪ್ರಕಟಣೆ ಬಾಕಿಯಿರುವಾಗಲೇ ಬ್ಯಾಂಕಿನ ಪ್ರಾದೇಶಿಕ ಕಚೇರಿಗಳು ಅಂಥ ಖಾತೆಗಳನ್ನು ತೆರೆಯಲು ಶೀಘ್ರವಾಗಿ ಅನುಮತಿ ನೀಡಲಾಗುವುದು.

ಈ ಹೊಸ ಸೌಲಭ್ಯದ ಕಾರ್ಯಾಚರಣೆಯನ್ನು ಒಂದು ವರ್ಷದ ನಂತರ ಪುನರಾವಲೋಕಿಸಲಾಗುವುದು ಮತ್ತು ವಾಸ್ತವಿಕ ಅನುಭವದ ಹಿನ್ನೆಲೆಯಲ್ಲಿ ಯೋಜನೆಯನ್ನು ಮಾರ್ಪಾಟು ಮಾಡಬಹುದು/ಉದಾರೀಕರಿಸಬಹುದು.

ಪಿ.ವಿ. ಸದಾನಂದನ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–02/462